ಸುಮ್ಮನಾಗಿಬಿಡುತ್ತಿದ್ದರು. ಅವರು ಪಾದ ಮುಟ್ಟಿದಾಗ ಪಾದಕ್ಕಿರೊ ಪುಣ್ಯ ಕೈಬೆರಳುಗಳಿಗಿಲ್ಲವಾಯಿತಲ್ಲ ಎಂದು ಶಪಿಸಿಕೊಳ್ಳುತ್ತಿದ್ದರು. ಅಂದು ಬಂದ ಹೆಂಗಸರೆಲ್ಲ ಶ್ರೀಗಳ ಕಣ್ಣಿಗೆ ಸುಂದರವಾಗಿಯೇ ಕಂಡಿದ್ದರು. ದಿನ ಕಳೆಯಲು ಬಂದರೂ... ಸ್ವಾಮಿಗಳು ಅಂದುಕೊಂಡದ್ದು ಈಡೇರದೇ ಇದ್ದಾಗ ಸ್ವತಃ ಬೇಸರಿಸಿಕೊಂಡಿದ್ದರು.



ಆ ದಿನ ಸಂಜೆ ಒಬ್ಬಾಕೆ ಭಕ್ತೆ ಬಂದೇ ಬಿಟ್ಟಳು. ಸ್ವಾಮೀಜಿ ಆಕೆಯ ಎತ್ತರಕ್ಕೆ, ಗಾತ್ರಕ್ಕೆ, ಬಳುಕಿಗೆ ದೂರದಿಂದಲೆ ಮನಸೋತಿದ್ದರು. ಬಂದಾಕೆಯ ಹಿಂದೆ ಮುಂದೆ ಜನಜಂಗುಳಿ ಇಲ್ಲವಾಗಿ ಆಕೆಯೊಂದಿಗೆ ಇದ್ದ ಚಿಕ್ಕ ಹುಡುಗ ಮಗನಿರಬೇಕೆಂದು ಭಾವಿಸಿದರು. ಗಟ್ಟಿ ಮನಸ್ಸು ಮಾಡಿ ಆಕೆ ಪಾದಕ್ಕೆರಗಿದಾಗ ಭುಜ ಹಿಡಿದು ಮೇಲಕ್ಕೆತ್ತೇ ಬಿಟ್ಟರು. ಆಶ್ಚರ್ಯಗೊಂಡ ಆಕೆ ಕಳ್ಳನಗು ತುಳುಕಿಸಿ ಅಲ್ಲಿಂದ ಹೊರಟು ಹೋದಳು. ಉತ್ಸಾಹಗೊಂಡ ಸ್ವಾಮಿಗಳು ಅವಳಿಂದ ಇನ್ನೂ ಏನಾದರೂ ಸುಳಿವು ಸಿಗಬಹುದಾ ಎಂದು ತಕ್ಷಣವೇ ಹಿಂದಿಂದೆ ಹೊರಟು ಬಾಗಿಲು ಬಳಿ ನಿಂತು ದಿಟ್ಟಿಸಿದರು. ಆಕೆ ಅಷ್ಟು ಬೇಗ ಅದೆಲ್ಲಿ ಹೋದಳೊ... ಮತ್ತೆ ಕಾಣಿಸಲೆ ಇಲ್ಲ. ಮುಂದೆ ಬರುವ ಭಕ್ತೆಯರಲ್ಲೆಲ್ಲ ಅವಳನ್ನೆ ಹುಡುಕಿದರು. ಯಾರೂ ಅವಳಾದಂತಿರಲಿಲ್ಲ. ಇದರಿಂದ ಸ್ವಾಮಿಜಿಗಳಿಗೆ ನಿರಾಶೆಯಾಯಿತಾದರೂ ಒಂದು ಮಟ್ಟದ ದೃಢತೆ ಸಿಕ್ಕಂತಾಗಿತ್ತು. ಅಂದಿನಿಂದ ಮೊದಲ್ಗೊಂಡು ಇಷ್ಟ ಆದವರನ್ನ ಮುಟ್ಟಿ ಭುಜ ಸವರುವುದನ್ನು ಬಿಡದೆ ರೂಢಿಸಿಕೊಂಡರು.

ಈಗ ಕಿರಿಯ ಶ್ರೀಗಳು ಎಲ್ಲದರಲ್ಲೂ ಸುಂದರವಾದದ್ದನ್ನೆ ಕಾಣತೊಡಗಿದರು. ಕುರೂಪವೆಂಬುದು ಜಗದಲ್ಲಿ ಇಲ್ಲವೇ ಇಲ್ಲವೇನೊ ಎನಿಸತೊಡಗಿತು. ಪ್ರತಿ ನಿತ್ಯ ತಮ್ಮ ಮಠದ ಅಂಗಳ ಸ್ವಚ್ಛತೆಗೆಂದು ಬರುತ್ತಿದ್ದ ಅರವತ್ತರ ಆಸುಪಾಸಿನ ಲಿಂಗಮ್ಮನೂ ಒಮ್ಮೆ ಹಿಂದಿಗಿಂತಲೂ ಬೇರೆಯದ್ದೇ ಆಗಿ ಕಂಡಳು. ಸದಾ ಹಳೆಯದಾದ ಕೊಳಕು ಬಟ್ಟೆಯಲ್ಲೆ ಇರುತ್ತಿದ್ದ ಆಕೆ ಸ್ನಾನವೆಂಬುದನ್ನ ದೂರವೇ ದೂಡಿದಂತಿದ್ದಳಾದರೂ... ಅತ್ತಕಡೆ ತಿರುಗಿ ಕಸ ಗುಡಿಸುತ್ತಿದ್ದರೆ ಬತ್ತಿದಂತಿದ್ದ ಆಕೆಯ ಹಿಂಬದಿ ರಸಭರಿತವಾಗಿಯೇ ಕಂಡುಬಂದಿತ್ತು. ಆಗಿನಿಂದ ಆಕೆ ಮುಮ್ಮುಖವಾಗಲ್ಲದೆ ಹಿಮ್ಮುಖವಾಗಿ ಕಸಗುಡಿಸುವುದೇ ಶ್ರೀಗಳಿಗೆ ಹೆಚ್ಚು ಅಪ್ಯಾಯಮಾನವೆನಿಸಿ, ತದೇಕಚಿತ್ತದಿಂದ ನೋಡುತ್ತಿದ್ದರು. ಇದೇ ಭಕ್ತೆ ಲಿಂಗಮ್ಮ ಒಮ್ಮೆ ಅನಾರೋಗ್ಯಪೀಡಿತಳಾದಾಗ ನನ್ನಿಂದ ಮಠದ ಸ್ವಚ್ಛ ವಾತಾವರಣ ಕೆಡಬಾರದೆಂದು ಬಗೆದು, ಕೆಲದಿನದ ಮಟ್ಟಿಗೆ ತವರಿಗೆ ಬಂದಿದ್ದ ಮಗಳು ರತ್ನಳನ್ನು ಮಠದ ಕೆಲಸಕ್ಕೆಂದು ಕಳುಹಿಸಿದ್ದಳು.